ದಿನಾಂಕ 19-02-2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಪಾಟೀ ಸವಾಲುಃ 1 ರಿಂದ 4 ನೇ ಪ್ರತಿವಾದಿಯರ ಪರ ಶ್ರೀ ಎಮ್.ಎಸ್.ಹೆಚ್ ವಕೀಲರಿಂದ.**

1 ರಿಂದ 4 ನೇ ಪ್ರತಿವಾದಿಯರು ನನಗೆ ಪರಿಚಯವಿರುತ್ತಾರೆ. ಸದರಿಯವರು ಕಳೆದ 50 ವರ್ಷಗಳಿಂದ ಹೂವಿನಹೆಡಗಿ ಗ್ರಾಮದಲ್ಲಿ ವಾಸವಿರುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿ ಹನುಮಂತ್ರಾಯ ಮಹಾದೇವಮ್ಮಳ ತಮ್ಮ ಎಂದರೆ ಸರಿ. ಮಹಾದೇವಮ್ಮಳ ಗಂಡ ಗೂಳಪ್ಪ ತೀರಿಕೊಂಡು ಅಂದಾಜು 40 ವರ್ಷ ಆಗಿರಬಹುದು. ಗೂಳಪ್ಪನ ಸ್ವತ್ತುಗಳಲ್ಲಿ ಮೊದಲೇ ವಿಭಾಗ ಆಗಿರುತ್ತದೆ ಎಂದರೆ ಸರಿ. ದಾವಾ ಸ್ವತ್ತುಗಳು ಗೂಳಪ್ಪನ ಭಾಗಕ್ಕೆ ಬಂದ ಸ್ವತ್ತುಗಳಾಗಿರುತ್ತವೆ ಎಂದರೆ ಸರಿ. ಗೂಳಪ್ಪ ತೀರಿಕೊಂಡ ನಂತರ ದಾವಾ ಸ್ವತ್ತುಗಳು ಆತನ ಹೆಂಡತಿ ಮಹಾದೇವಮ್ಮಳ ಹೆಸರಿಗೆ ವರ್ಗಾವಣೆ ಆಗಿರುತ್ತವೆ ಎಂದರೆ ಸರಿ. ಗೂಳಪ್ಪ ಮತ್ತು ಮಹಾದೇವಮ್ಮ ದಂಪತಿಗಳಿಗೆ ಮಕ್ಕಳಿಲ್ಲದೇ ಇರುವುದರಿಂದ ಸ್ವತ್ತುಗಳನ್ನು ನೋಡಿಕೊಳ್ಳಲು ಹನುಮಂತ್ರಾಯ ಸದರಿ ಮಹಾದೇವಮ್ಮ ಇವಳೊಂದಿಗೆ ವಾಸವಿದ್ದ ಎಂದರೆ ಸರಿ. ಸದರಿ ಮಹಾದೇವಮ್ಮ ತನ್ನ ಜೀವಿತ ಕಾಲದಲ್ಲಿ ದಾವಾ ಸ್ವತ್ತುಗಳನ್ನು ಮೃತ್ಯು ಪತ್ರದ ಮೂಲಕ ಹನುಮಂತ್ರಾಯನಿಗೆ ಕೊಟ್ಟಿರುತ್ತಾಳೆ ಎಂದರೆ ನನಗೆ ಗೊತ್ತಿಲ್ಲ.

ಸರ್ವೆ ನಂಬರ 26 ಕ್ಷೇತ್ರ 8 ಎಕರೆ ಚಿಲ್ಲರೆ ಇರುತ್ತದೆ. ಸದರಿ 8 ಎಕರೆ ಜಮೀನಿನಲ್ಲಿ ವಾದಿ ಶರಣಗೌಡ 4 ಎಕರೆ ಜಮೀನಿನಲ್ಲಿ ಸಾಗುವಳಿ ಮಾಡುತ್ತಿದ್ದಾನೆ ಎಂದರೆ ಸರಿ. ಸದರಿ 4 ಎಕರೆ ಜಮೀನು ಮಹಾದೇವಮ್ಮಳಿಂದ ಅವಳ ಮೃತ್ಯುಪತ್ರದ ಆಧಾರದ ಮೇಲೆ ಶರಣಗೌಡನಿಗೆ ಮುಟೇಶನ್ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ 8 ಎಕರೆ ಜಮೀನಿನಲ್ಲಿ 4 ಎಕರೆ ಜಮೀನು ಶರಣಗೌಡನ ಹೆಸರಿನಲ್ಲಿ ಬಾಕಿ ಉಳಿದ ಜಮೀನು ಹನುಮಂತ್ರಾಯ ಹೆಸರಿನಲ್ಲಿ ಇದೆ ಎಂದರೆ ಸರಿ. ಸದರಿಯವರು ತಮ್ಮ ಹೆಸರಿಗೆ ಯಾವ ಆಧಾರದ ಮೇಲೆ ಮುಟೇಶನ್ ಮಾಡಿಸಿಕೊಂಡಿರುತ್ತಾರೆ ನನಗೆ ಗೊತ್ತಿರುವುದಿಲ್ಲ. ಶರಣಗೌಡನ ಹೆಸರಿನಲ್ಲಿರುವ 4 ಎಕರೆ ಜಮೀನನ್ನು ಹೊರತುಪಡಿಸಿ ಉಳಿದ ಎಲ್ಲಾ ಸ್ವತ್ತುಗಳನ್ನು ಹನುಮಂತ್ರಾಯ ಸಾಗುವಳಿ ಮಾಡುತ್ತಿದ್ದ ಎಂದರೆ ಸರಿ, ಸಾಕ್ಷಿ ಮುಂದುವರೆದು ಹನುಮಂತ್ರಾಯನ ಮರಣದ ನಂತರ 1 ನೇ ವಾದಿ ಶರಣಗೌಡ ಎಲ್ಲಾ ಜಮೀನುಗಳ ಸಾಗುವಳಿ ಮಾಡುತ್ತಿದ್ದಾನೆ ಎಂದು ನುಡಿಯುತ್ತಾರೆ.

ದಾವಾ ಸ್ವತ್ತುಗಳನ್ನು ಶರಣಗೌಡ ಸಾಗುವಳಿ ಮಾಡುತ್ತಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳನ್ನು ಹನುಮಂತ್ರಾಯನ ಮರಣದ ನಂತರ ಆತನ ಮಕ್ಕಳು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಗೂಳಪ್ಪ ಸರ್ವೆ ನಂಬರ 70/5 ಕ್ಷೇತ್ರ 5 ಎಕರೆ

ಜಮೀನನ್ನು 9 ನೇ ಪ್ರತಿವಾದಿ ರಂಗಪ್ಪ ಇವರಿಗೆ ಮಾರಾಟ ಮಾಡಿರುತ್ತಾನೆ ಎಂದರೆ ಸರಿ. ಸದರಿ ರಂಗಪ್ಪ ತಾನು ಖರೀದಿಸಿದ ಜಮೀನನ್ನು ಸಾಗುವಳಿ ಮಾಡುತ್ತಿದ್ದಾನೆ ಎಂದರೆ ಶರಣಗೌಡ ಸಾಗುವಳಿ ಮಾಡುತ್ತಿದ್ದಾನೆ ಎಂದು ನುಡಿಯುತ್ತಾರೆ. ಶರಣಗೌಡ ರಂಗಪ್ಪನಿಗೆ ಮಾರಾಟ ಮಾಡಿದ 5 ಎಕರೆ ಜಮೀನನ್ನು ಸಾಗುವಳಿ ಮಾಡುತ್ತಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಸ್ವತ್ತುಗಳ ಪಹಣಿಗಳನ್ನು ನಾನು ನೋಡಿರುವುದಿಲ್ಲ. ಶರಣಗೌಡ ಹನುಮಂತ್ರಾಯ ಮತ್ತು ಆತನ ಮಕ್ಕಳ ವಿರುದ್ಧ ದಾವೆ ಸಲ್ಲಿಸಿರುತ್ತಾರೆ. ಪ್ರತಿವಾದಿಗಳ ಹೆಸರುಗಳಲ್ಲಿ ದಾವಾ ಸ್ವತ್ತಿನ ಪಹಣಿಗಳು ಬರುತ್ತಿವೆ ಎಂದರೆ ನನಗೆ ಗೊತ್ತಿಲ್ಲ.

ದಾವಾ ಸ್ವತ್ತುಗಳ ಚೆಕ್ಬಂದಿ ನನಗೆ ಹೇಳಲು ಬರುತ್ತದೆ. ಸರ್ವೆ ನಂಬರ 26 ಕ್ಷೇತ್ರ 8 ಎಕರೆ 1 ಗುಂಟೆ ಜಮೀನಿನ ಚೆಕ್ಬಂದಿ ಪೂರ್ವಕ್ಕೆ - ಮಲ್ಲಯ್ಯ ಇವರ ಜಮೀನು, ಪಶ್ಚಿಮಕ್ಕೆ - ರಸ್ತೆ, ಉತ್ತರಕ್ಕೆ ಶರಣಗೌಡ ಇವರ ಜಮೀನು ಮತ್ತು ದಕ್ಷಿಣಕ್ಕೆ - ಬಸ್ಸಪ್ಪ ಇವರ ಜಮೀನು.

ಸರ್ವೆ ನಂಬರ 70/ಎ ರ ಚೆಕ್ಬಂದಿ ನನಗೆ ಹೇಳಲು ನೆನಪಿರುವುದಿಲ್ಲ. ವಾದಿ ಶರಣಗೌಡ ಗ್ರಾಮದಲ್ಲಿ ನನಗೆ ಪರಿಚಯವಿರುತ್ತಾನೆ. ಶರಣಗೌಡ ಸರ್ವೆ ನಂಬರ 26 ರಲ್ಲಿನ 4 ಎಕರೆಯ ಒಂದು ಭಾಗವನ್ನು ಸಾಗುವಳಿ ಮಾಡುತ್ತಿದ್ದುದ್ದರಿಂದ ಸದರಿ ಜಮೀನಿನ ಚೆಕ್ಬಂದಿ ಗೊತ್ತಿದ್ದುದ್ದರಿಂದ ಮೇಲಿನಂತೆ ನುಡಿದಿರುತ್ತೇನೆ. ವಾದಿ ಶರಣಗೌಡನ ಕೋರಿಕೆಯ ಮೇರೆಗೆ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮಹಾದೇವಮ್ಮ ಹನುಮಂತ್ರಾಯನ ಹೆಸರಿಗೆ ಮೃತ್ಯು ಪತ್ರ ಮಾಡಿರುವ ವಿಚಾರ ಮತ್ತು ಸದರಿ ಮೃತ್ಯು ಪತ್ರದ ಆಧಾರದ ಮೇಲೆ ಹನುಮಂತ್ರಾಯ ದಾವಾ ಸ್ವತ್ತುಗಳನ್ನು ತನ್ನ ಹೆಸರಿಗೆ ಮಾಡಿಕೊಂಡಿರುವ ವಿಚಾರ ನನಗೆ ಗೊತ್ತಿದ್ದರೂ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಸೇರಿದ ಸರ್ವೆ ನಂಬರ 61 ಜಮೀನು ಇದ್ದು ಅದರ ಕ್ಷೇತ್ರ 6 ಎಕರೆ 12 ಗುಂಟೆ ಇರುತ್ತದೆ. ಸರ್ವೆ ನಂಬರ 26 ಮತ್ತು ನನ್ನ ಜಮೀನು ಸರ್ವೆ ನಂಬರ 61 ರ ಜಮೀನುಗಳು ಹತ್ತಿರ ಇರುತ್ತವೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಿಗೆ ಪ್ರತಿವಾದಿಯರೇ ಮಾಲೀಕರಾಗಿದ್ದು ಅವರೇ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಮೊಸತನದಿಂದ ಮುಟೇಶನ್ ಮಾಡಿಸಿಕೊಂಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದ ವಿಷಯಗಳು ನನಗೆ ಗೊತ್ತಿರುವುದಿಲ್ಲ.

**ಪಾಟೀ ಸವಾಲುಃ 5 ರಿಂದ 8 ನೇ ಪ್ರತಿವಾದಿಯರ ಪರ ಶ್ರೀ ವಿ.ಎಮ್.ಎಮ್ ವಕೀಲರಿಂದ.**

ಶರಣಗೌಡನ ತಂದೆಯ ಹೆಸರು ಭೀಮನಗೌಡ ಎಂದು ಇರುತ್ತದೆ. ಭೀಮನಗೌಡನ ತಂದೆಯ ಹೆಸರು ಬಲವಂತ್ರಾಯ ಎಂದು ಇರುತ್ತದೆ. ಬಲವಂತ್ರಾಯನಿಗೆ ಇಬ್ಬರು ಗಂಡು ಮಕ್ಕಳು

ಇರುತ್ತಾರೆ ಅವರುಗಳೆಂದರೆ ಭೀಮನಗೌಡ ಮತ್ತು ಬಸನಗೌಡ ಎಂದು ಇರುತ್ತಾರೆ. ಭೀಮನಗೌಡನಿಗೆ ಶರಣಗೌಡ, ಸಿದ್ದಲಿಂಗಮ್ಮ ಮತ್ತು ಗೂಳಮ್ಮ ಎಂದು ಮೂರು ಜನ ಮಕ್ಕಳಿರುತ್ತಾರೆ. ಬಸನಗೌಡನಿಗೆ ಗೂಳಪ್ಪ ಎಂಬ ಒಬ್ಬ ಗಂಡು ಮಗನಿದ್ದು ಒರ್ವ ಬಸಲಿಂಗಮ್ಮ ಎಂಬ ಮಗಳು ಇರುತ್ತಾಳೆ. ಗೂಳಪ್ಪನ ಹೆಂಡತಿಯ ಹೆಸರು ಮಹಾದೇವಮ್ಮ ಎಂದು ಇರುತ್ತದೆ. ಶರಣಗೌಡನ ತಂದೆ ಭೀಮನಗೌಡ ಯಾವಾಗ ತೀರಿಕೊಂಡಿರುತ್ತಾರೆ ನನಗೆ ಹೇಳಲು ಬರುವುದಿಲ್ಲ. ಬಸನಗೌಡ ಯಾವಾಗ ತೀರಿಕೊಂಡಿರುತ್ತಾರೆ ನನಗೆ ಹೇಳಲು ಬರುವುದಿಲ್ಲ. ಮಹಾದೇವಮ್ಮ ತೀರಿಕೊಂಡು 4-5 ವರ್ಷ ಆಗಿರುತ್ತದೆ. 05 ಜಮೀನುಗಳ ಮೇಲೆ ದಾವೆ ಸಲ್ಲಿಸಿರುತ್ತಾರೆ ಅವುಗಳ ಸರ್ವೆ ನಂಬರ 94/1 ಕ್ಷೇತ್ರ 2 ಎಕರೆ ಚಿಲ್ಲರೆ ಗುಂಟೆ, 94/2 ಕ್ಷೇತ್ರ 5 ಗುಂಟೆ, 21 ಕ್ಷೇತ್ರ 5 ಎಕರೆ ಚಿಲ್ಲರೆ ಗುಂಟೆ, 70 ಕ್ಷೇತ್ರ 13 ಎಕರೆ ಚಿಲ್ಲರೆ ಗುಂಟೆ ಮತ್ತು 26 ಕ್ಷೇತ್ರ 8 ಎಕರೆ ಚಿಲ್ಲರೆ ಗುಂಟೆ ಎಂದು ಇರುತ್ತವೆ. ಸದರಿ ಜಮೀನುಗಳು ಹೂವಿನಹೆಡಗಿ ಸೀಮೆಯಲ್ಲಿ ಬರುತ್ತವೆ. ಸರ್ವೆ ನಂಬರ 94/1 ರ ಪಹಣಿ ಯಾರ ಹೆಸರಿನಲ್ಲಿದೆ ನಾನು ನೋಡಿರುವುದಿಲ್ಲ. ಸದರಿ ಜಮೀನಿನ 40 ವರ್ಷಗಳ ಹಿಂದಿನ ಪಹಣಿಯಲ್ಲಿ ಭೀಮನಗೌಡನ ಹೆಸರು ಇತ್ತು.

ಬಸವಂತ್ರಾಯ ತಂದೆ ಭೀಮರಾಯ ಇವರ ಪರಿಚಯ ಇರುತ್ತದೆ ಬಹಳ ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ಸದರಿ ಬಸವಂತ್ರಾಯನ ಹೆಸರಿನಲ್ಲಿ ಸರ್ವೆ ನಂಬರ 94/1 ನ್ನು ಭೀಮನಗೌಡ ಮತ್ತು ಮಹಾದೇವಮ್ಮ ಕಬ್ಜಾ ಸಹಿತ ವತ್ತಿ ಹಾಕಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವತ್ತಿ ಪತ್ರ 1979 ರಲ್ಲಿ ನೋಂದಣಿ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವತ್ತಿ ಪತ್ರದ ಆಧಾರದ ಮೇಲೆ ಬಸವಂತ್ರಾಯನ ಹೆಸರು ಪಹಣಿಯಲ್ಲಿ ದಾಖಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ 94 ರ ಪಹಣಿಯನ್ನು ನಾನು ನೋಡಿರುವುದಿಲ್ಲ. ನಮ್ಮೂರಿನಿಂದ ಸರ್ವೆ ನಂಬರ 94 ಉತ್ತರ ದಿಕ್ಕಿಗೆ ಇರುತ್ತದೆ. ವತ್ತಿ ಪತ್ರದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದ್ದರೂ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂಬರ 94/1 ನ್ನು ವತ್ತಿ ಆಧಾರದ ಮೇಲೆ ಪ್ರತಿವಾದಿ ನಂಬರ 7 ಮತ್ತು 8 ರವರ ತಂದೆ ಬಸವಂತ್ರಾಯ ಸಾಗುವಳಿ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಬಸವಂತ್ರಾಯನ ಮರಣದ ನಂತರ ಆತನ ಮಕ್ಕಳಾದ ಪ್ರತಿವಾದಿ ನಂಬರ 7 ಮತ್ತು 8 ರವರು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 9(ಬಿ) (ಡಿ) ನೇ ಪ್ರತಿವಾದಿ ಪರ ಶ್ರೀ ಹೆಚ್.ಎಮ್ ವಕೀಲರು ಗೈರು ಹಾಜರಿದ್ದು, ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.**

**ಪಾಟೀ ಸವಾಲುಃ 11 ನೇ ಪ್ರತಿವಾದಿ ಪರ ಶ್ರೀ ಎ.ಬಿ.ಹೆಚ್ (ಬಿ.ಎಸ್) ವಕೀಲರು ಪ್ರತಿವಾದ ಪತ್ರ ಸಲ್ಲಿಸಿರುವುದಿಲ್ಲ ಎಂದು ನುಡಿದಿದ್ದರಿಂದ ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.**

**ಪಾಟೀ ಸವಾಲುಃ 12 ನೇ ಪ್ರತಿವಾದಿ ಪರ ಶ್ರೀ ಹೆಚ್.ಕೆ (ಎ.ಎಮ್.ಪಿ) ವಕೀಲರು ಪ್ರತಿವಾದ ಪತ್ರ ಸಲ್ಲಿಸಿರುವುದಿಲ್ಲ ಎಂದು ನುಡಿದಿದ್ದರಿಂದ ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.**

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.